**<u>ದಿನಾಂಕಃ 06.03.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.</u>**

**<u>ಪಾಟೀ ಸವಾಲು ವಾದಿ ಪರ ಶ್ರೀ. ಸಿ ಕೆ ವಕೀಲರಿಂದಃ-</u>**

1. ನಾನು ಓದು ಬರಹ ಕಲಿತಿಲ್ಲ. ವಾದಿಯರು ನಮ್ಮ ಗ್ರಾಮದವರು ಎಂದರೆ ಸಾಕ್ಷಿ ನನ್ನ ಅಣ್ಣ ತಮ್ಮಂದಿರು ಎನ್ನುತ್ತಾರೆ. ನನ್ನ ತಾತ ಚಿಕ್ಕಪುಟ್ಟಯ್ಯ ಮತ್ತು ವಾದಿಯರು ದೊಡ್ಡ ಪುಟ್ಟಯ್ಯನ ವಂಶಸ್ಥರು ಎಂದು ನುಡಿದು, ದೊಡ್ಡಪುಟ್ಟಯ್ಯ ಮತ್ತು ಚಿಕ್ಕಪುಟ್ಟಯ್ಯ ರವರುಗಳು ಅಣ್ಣ ತಮ್ಮಂದಿರು ಎಂದು ನುಡಿಯುತ್ತಾರೆ. ಮಂಗಾಡಹಳ್ಳಿ ಗ್ರಾಮದ ಲಕ್ಷ್ಮಿ ದೇವರ ದೇವಸ್ಥಾನದ ಪಕ್ಷ ವಾದಿಯರಿಗೆ ಸೇರಿದ ಮನೆಗಳು ಇವೆ ಎಂದರೆ ಸರಿ. ನನ್ನ ತಂದೆ ಕುಂಟಯ್ಯನಿಗೆ ಸೇರಿದ ಮನೆ ದೇವಸ್ಥಾನದ ಪಕ್ಷ ಇದೆ ಎಂದರೆ ಸಾಕ್ಷಿಯು ದೇವಸ್ಥಾನದ ಜಾಗವನ್ನು ಬಿಟ್ಟು ಪಕ್ಕದಲ್ಲಿ ಇದೆ ಎನ್ನುತ್ತಾರೆ. ದೇವಸ್ಥಾನದ ಪಶ್ಚಿಮ ಭಾಗದ ದಾವಾ ಆಸ್ತಿಯ 2ನೇ ಸ್ವತ್ತಿನ ಪಶ್ಚಿಮ ಭಾಗಕ್ಕೆ ವಾದಿಯರ ಚಿಕ್ಕಪ್ಪ ಜವರಯ್ಯರವರಿಗೆ ಸೇರಿದ ಖಾಲಿ ನಿವೇಶನ ಇದೆ ಎಂದರೆ ಸರಿಯಲ್ಲ.

2. ವಾದಿಯರ ಚಿಕ್ಕಪ್ಪ ಜವರಯ್ಯನಿಗೆ ಸೇರಿದ ಖಾಲಿ ನಿವೇಶನಕ್ಕೆ ಸಂಬಂದಿಸಿದಂತೆ ವಿರುಪಾಕ್ಷಿಪುರ ಗ್ರಾಮ ಪಂಚಾಯಿತಿಯಲ್ಲಿ ಖಾತೆ ದಾಖಲಾಗಿದೆ ಎಂದರೆ ಸರಿಯಲ್ಲ. ಸದರಿ ಖಾಲಿ ನಿವೇಶನದಲ್ಲಿ ವಾದಿಯರು ಸ್ವಾಧೀನಾನುಭೋಗದಲ್ಲಿ ಇದ್ದಾರೆ ಎಂದರೆ ಸಾಕ್ಷಿ ಅವರಿಗೆ ಸೇರಿದ ಯಾವುದೇ ಖಾಲಿ ನಿವೇಶನ ಇಲ್ಲ ಅದು ದೇವಸ್ಥಾನಕ್ಕೆ ಸೇರಿದ ಆಸ್ತಿ ಎನ್ನುತ್ತಾರೆ. ಲಕ್ಷ್ಮೀ ದೇವಸ್ಥಾನ ಇರುವ ಜಾಗ ದೊಡ್ಡಪುಟ್ಟಯ್ಯ ಮತ್ತು ಚಿಕ್ಕಪುಟ್ಟಯ್ಯ ಅವರ ತಂದೆ ಹೊಂಬಿ ಹೊಂಬಾಳಯ್ಯರವರಿಗೆ ಸೇರಿದ ಜಾಗ ಎಂದರೆ ಸರಿಯಲ್ಲ. ಸದರಿ ಲಕ್ಷ್ಮೀ ದೇವಸ್ಥಾನ ನಮ್ಮ ಕುಟುಂಬಕ್ಕೆ ಸೇರಿದ ಹೆಣ್ಣು ದೇವಸ್ದಾನ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ಯಾರ ಹೆಸರಿಗೆ ಖಾತೆ ಇದೆ ಎಂದು ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿಯು ಗ್ರಾಮಕ್ಕೆ ಸೇರಿದ ಸ್ವತ್ತು ಎನ್ನುತ್ತಾರೆ.

3. ದಾವಾ ಆಸ್ತಿಯನ್ನು ಹೊರತುಪಡಿಸಿ ಲಕ್ಷ್ಮೀ ದೇವರ ದೇವಸ್ಥಾನಕ್ಕೆ ಎಷ್ಟು ವಿಸ್ತೀರ್ಣದ ಆಸ್ತಿ ಇದೆ ಎಂದು ಗೊತ್ತಾ ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. ಲಕ್ಷ್ಮೀ ದೇವರ ದೇವಸ್ಥಾನ ಮುಂಭಾಗ ಕಾಂಕ್ರೀಟ್ ರಸ್ತೆ ಇದೆ ಎಂದರೆ ಸರಿ. ನಿಪಿ-26 ಫೋಟೋದಲ್ಲಿ ಕಾಣುವ ಖಾಲಿ ಜಾಗ ವಾದಿಯರಿಗೆ ಸೇರಿದ್ದು ಎಂದರೆ ಸರಿಯಲ್ಲ. ನಿಪಿ-26 ಫೋಟೋದಲ್ಲಿ ಕಾಣುವ ಜಾಗ ದೇವಸ್ಥಾನಕ್ಕೆ ಸೇರಿದ್ದಿದ್ದರೆ ಕಾಂಕ್ರೀಟ್ ಹಾಕಿಸುತ್ತಿರಲಿಲ್ಲ ಎಂದರೆ ಸರಿಯಲ್ಲ. ಕಾಂಕ್ರೀಟ್ ರಸ್ತೆಯ ಎರಡು ಬದಿಯಲ್ಲಿ ಚರಂಡಿ ಮಾಡಿದ್ದಾರೆ ಎಂದರೆ ಸರಿ. ದಾವಾ ಐಟಂ 1 ಮತ್ತು 2 ಸ್ವತ್ತುಗಳು ದೇವಸ್ಥಾನಕ್ಕೆ ಸೇರಿದ್ದವು ಎಂದು 1ನೇ ವಾದಿ ತಂದೆ ಹೊಂಬಾಳಯ್ಯ ಅಲಿಯಾಸ್ ದೊಣ್ಣಯ್ಯ ದೇವಸ್ಥಾನ ಸುಪರ್ದಿಗೆ ಸೇರಿದ ಆಸ್ತಿಗಳು ಎಂದು ಪತ್ರ ಬರೆದುಕೊಟ್ಟಿದ್ದಾರಾ ಎಂದರೆ ಸಾಕ್ಷಿಯು ಸದರಿ ದೊಣ್ಣಯ್ಯ ಸತ್ತು 40 ರಿಂದ 50 ವರ್ಷ ಆಗಿದೆ ಎಂದು ನುಡಿದು, ವಾದಿಯರು ದಾಖಲೆ ಸೃಷ್ಟಿ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ.

4. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ದಾವಾ ಆಸ್ತಿಗಳನ್ನು ದೊಣ್ಣಯ್ಯ ಬಿಟ್ಟು ಕೊಟ್ಟಿದ್ದಾರೆ ಎಂದು ಹೇಳಿದ್ದಾರೋ ಇಲ್ಲವೋ ಎಂದರೆ ಸಾಕ್ಷಿ ನಾನು ಹೇಳಿಲ್ಲ ಎನ್ನುತ್ತಾರೆ. ತನ್ನ ಪ್ರತಿವಾದ ಪತ್ರ ತಯಾರು ಮಾಡಲು ವಕೀಲರಿಗೆ ಯಾರು ಮಾಹಿತಿ ಕೊಟ್ಟಿದ್ದು ಎಂದರೆ ಸಾಕ್ಷಿ ನಾನೇ ಎನ್ನುತ್ತಾರೆ. ದಾವಾ ಸ್ವತ್ತುಗಳ ಕಂದಾಯ ದಾಖಲೆಗಳನ್ನು 1ನೇ ಪ್ರತಿವಾದಿಯ ತಂದೆಯ ಹೆಸರಿಗೆ ಗ್ರಾಮ ಪಂಚಾಯಿತಿಯಲ್ಲಿ ಇವೆ ಎಂದರೆ ಸರಿಯಲ್ಲ. 1ನೇ ವಾದಿಯು ದಾವಾ ಆಸ್ತಿಗಳ ಖಾತೆಯನ್ನು ತಂದೆ ಹೆಸರಿನಿಂದ ತನ್ನ ಹೆಸರಿಗೆ ಖಾತೆ ಮಾಡಿಸಿಕೊಳ್ಳಲು ವಿರುಪಾಕ್ಷಿಪುರ ಗ್ರಾಮ ಪಂಚಾಯಿತಿಗೆ ಅರ್ಜಿ ಕೊಟ್ಟಾಗ ನಾನು ಮತ್ತು ಗ್ರಾಮಸ್ಥರು ಸೇರಿ ಖಾತೆ ಮಾಡದಂತೆ ತಕರಾರು ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ.

5. ವಾದಿಯೇ ದಾವಾ ಸ್ವತ್ತುಗಳಿಗೆ ಕಂದಾಯ ಕಟ್ಟುತ್ತಾ ಬಂದಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ವಾದಿಯರಿಗೆ ಸೇರಿದ ಪಿತ್ರಾರ್ಜಿತ ಸ್ವತ್ತುಗಳು ಎಂದರೆ ಸರಿಯಲ್ಲ. ದಾವಾ ಐಟಂ 1ರಲ್ಲಿ ವಾದಿಯರು ವಿದ್ಯುತ್ ಚ್ಚಕ್ತಿ ಸೌಲಭ್ಯ ಪಡೆದುಕೊಂಡಿದ್ದಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ವಾದಿಯರಿಗೆ ಸೇರಿದ ಪಿತ್ರಾರ್ಜಿತ ಆಸ್ತಿಗಳೆ ಹೊರತು ಲಕ್ಷ್ಮಿ ದೇವಸ್ಥಾನಕ್ಕೆ ಸೇರಿದ್ದಲ್ಲ ಎಂದರೆ ಸರಿಯಲ್ಲ. ವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ಲಕ್ಷ್ಮಿ ದೇವಸ್ಥಾನಕ್ಕೆ ಸೇರಿದ ಸ್ವತ್ತುಗಳು ಎಂದು ತೋರಿಸಲು ತಮ್ಮ ಬಳಿ ದಾಖಲೇ ಇದೆಯಾ ಎಂದರೆ ಸಾಕ್ಷಿ ಗ್ರಾಮಸ್ಥರೆಲ್ಲಾ ಬಂದು ಸಾಕ್ಷಿ ಹೇಳುತ್ತಾರೆ ಎನ್ನುತ್ತಾರೆ. ವಾದಿಯರು ಅಕ್ಕೂರು ಪೊಲೀಸ್ ಠಾಣೆಯಲ್ಲಿ ಪಿರ್ಯಾದು ದಾಖಲು ಮಾಡಿದ್ದರು ಎಂದರೆ ಸಾಕ್ಷಿಯು ವಿನಾಕಾರಣ ದಾಖಲು ಮಾಡಿದ್ದರು ಎನ್ನುತ್ತಾರೆ.

**ಮರು ವಿಚಾರಣೆ ಃ ಇಲ್ಲ**

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಣ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ
ನ್ಯಾಯಾಲಯ, ಚನ್ನಪಟ್ಟಣ